# <u>ನರನಾದ ಮೇಲೆ ಹರಿನಾಮ ಜಿಹ್ವೆಯೊಳಿರಬೇಕು</u>

1. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchha Rayaru, page no. 66.
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page no. 79. The lyrics here are almost similar to that of the singer. In one stanza, there are differences with Ref. 3 and are given in yellow highlights.
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page no. 308.
4. **Note:** The lyrics given in the book mentioned in Ref. 3 above are almost similar to that of the singer. They are given without highlights.
5. The lyrics in the book in Ref. 1 above are slightly different and there are only three stanzas here. They are given separately in grey highlights.

ರಾಗ ನಾದನಾಮಕ್ರಿಯಾ ಆದಿ ತಾಳ

| | |
|---|---|
| ನರನಾದ ಮೇಲೆ ಹರಿ ನಾಮ | ನರನಾದ ಮೇಲೆ ಹರಿ ನಾಮ |
| ಜಿಹ್ವೆಯೊಳಿರಬೇಕು ॥ ಪ ॥ | ಜಿಹ್ವೆಯೊಳಿರಬೇಕು |
| | |
| ಭೂತದಯಾಪರನಾಗಿರ ಬೇಕು | ಭೂತದಯಾಪರನಾಗಿರ ಬೇಕು |
| ಪಾತಕವೆಲ್ಲವ ಕಳೆಯಲು ಬೇಕು | ಪಾತಕವೆಲ್ಲವ ಕಳೆಯಲು ಬೇಕು |
| ಮಾತು ಮಾತಿಗೆ ಹರಿ ಎಂದೆನಬೇಕು ॥ 1 ॥ | ಮಾತು ಮಾತಿಗೂ ಹರಿ ಎನಬೇಕು |
| | |
| ಆರು ವರ್ಗವನಳಿಯಲು ಬೇಕು | ವೇದ ಶಾಸ್ತ್ರಗಳನೋದಲು ಬೇಕು |
| ಮೂರು ಗುಣಂಗಳ ಮೀರಲು ಬೇಕು | ಭೇದಾಭೇದವ ತಿಳಿಯಲು ಬೇಕು |
| ಸೇರಿ ಬ್ರಹ್ಮನೊಳಿರಬೇಕು ॥ 2 ॥ | ಸಾಧು ಸಜ್ಜನರ ಸಂಗದೊಳಿರಬೇಕು |
| | |
| ಅಷ್ಟ ಮದಂಗಳ ತುಳಿಯಲು ಬೇಕು | ತಂದೆ ತಾಯಿಗಳ ಸೇವೆಯು ಬೇಕು |
| ದುಷ್ಟರ ಸಂಗವ ಬಿಡಲು ಬೇಕು | ಬಂದುದನುಂಡು ಸುಖಿಸಲು ಬೇಕು |
| ಕೃಷ್ಣ ಕೇಶವ ಎನಬೇಕು ॥ 3 ॥ | ತಂದೆ ಪುರಂದರ ವಿಠ್ಠಲನ ದಯೆ ಬೇಕು |

ವೇದ ಶಾಸ್ತ್ರವನೋದಲು ಬೇಕು
ಭೇದ ಅಹಂಕಾರವ ನೀಗಲುಬೇಕು
ಮಾಧವ ಸ್ಮರಣೆಯೊಳಿರಬೇಕು ॥ 4 ॥

ಶಾಂತಿ ಕ್ಷಮೆ ದಮೆ ಪಿಡಿಯಲು ಬೇಕು
ಭ್ರಾಂತಿ ಕ್ರೋಧವ ಕಳೆಯಲು ಬೇಕು
ಸಂತರ ಸಂಗತಿ ರತಿಯಿರಬೇಕು ॥ 5 ॥
(ಶಾಂತರ ಸಂಗದೊಳಿರಬೇಕು)

ಗುರುವಿನ ಚರಣಕ್ಕೆರಗಲು ಬೇಕು
ತರಣೋಪಾಯವ ಅರಿಯಲು ಬೇಕು
ವಿರಕ್ತಿ ಮಾರ್ಗದಲಿರಬೇಕು ॥ 6 ॥

ಬಂದದ್ದುಂಡು ಸುಖಿಸಲು ಬೇಕು
ನಿಂದಾ ಸ್ತುತಿಗಳ ತಾಳಲು ಬೇಕು
ತಂದೆ ಪುರಂದರ ವಿಠ್ಠಲ ಎನಬೇಕು ॥ 7 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಭೂತ ದಯಾಪರನಾಗಿರ** = ಪ್ರಾಣಿಗಳಲ್ಲಿ ದಯೆ ಉಳ್ಳವನು

**ರತಿ** = ಸಂತೋಷ, ಹಂಬಲ, ಆಸೆ, ವಿಷಯಾಸಕ್ತಿ, ಆನಂದ, ಪ್ರೀತಿ

**ಆರು ವರ್ಗ** – ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳೆಂಬ ಅರಿಷಡ್ವರ್ಗ.

**ಮೂರು ಗುಣಂಗಳು** – ಸತ್ತ್ವ, ರಜಸ್ಸು, ತಮಸ್ಸು.

**ಅಷ್ಟಮದಂಗಳು** – ಧನಮದ, ಕುಲಮದ, ವಿದ್ಯಾಮದ, ರೂಪಮದ, ಯೌವನ ಮದ, ಬಲಮದ, ತಪೋಮದ, ಸಿದ್ಧಿಮದ.

**ಭೇದ ಅಹಂಕಾರ** – ತನ್ನವರು, ಬೇರೆಯವರು ಎನ್ನುವ ಭೇದ; ತಾನು, ತನ್ನದು ಎನ್ನುವ ಅಹಂಕಾರ.

**ದಮೆ** = ದಮ, ಪಳಗಿಸುವಿಕೆ, ಇಂದ್ರಿಯ ನಿಗ್ರಹ, ಮನಸ್ಸು ಹತೋಟಿಯಲ್ಲಿಡುವುದು, ಶಿಕ್ಷೆ

**ತರಣೋಪಾಯ** – ಸಂಸಾರವನ್ನು ದಾಟುವ ದಾರಿ.

**ವಿರಕ್ತಿ ಮಾರ್ಗ** – ಈ ದೇಹ ಗಾಳಿಗಿಕ್ಕಿದ ಸೊಡರು, ಸಂಸಾರದಲ್ಲಿ ಸಾರವಿರದು ಎಂಬ ಭಾವ.

**ಬಂದದ್ದುಂಡು ಸುಖಿಸಲಿಬೇಕು, ನಿಂದಾಸ್ತುತಿಗಳ ತಾಳಲಿಬೇಕು** – 'ಯದೃಚ್ಛಾಲಾಭ ಸಂತುಷ್ಟಃ ದ್ವಂದ್ವಾತೀತಃ' ಎನ್ನುವ ಗೀತಾ ವಾಕ್ಯದ ಛಾಯೆ.

**Classification:** Keerthane
**Ankita:** tande purandara vittala
**Location:** NA
**Category:** jeevanoddhara, mukti marga, Aartha Bhava
**Group Words:** nara, sukha, Krishna, bayyi, kshame, sittu, Madhava, ahankara, keshava, brahma, veda, nalige,
**Pravachana:** NA
**Explanation:** NA